ಕಥೆಗಾರ್ತಿ ವೀಣಾ ಶಾಂತೇಶ್ವರ ಅವರೊಂದಿಗೆ ಗೀತಾ ವಸಂತ



**ಬಂಧನವಾ? ಗಂಡಸಿನ ಮುಕ್ತಿಯ ಸ್ವರೂಪ ಹಾಗೂ ಹೆಂಗಸಿನ ಮುಕ್ತಿಯ ಸ್ವರೂಪ ಬೇರೆ ಅನಿಸುತ್ತೆ.**

ಇದು ಜೈವಿಕ ಬಂಧನವೂ ಹೌದು. ಆದರೆ ಅದನ್ನು ಹೇಗೆ ನೋಡ್ತೀವಿ ಅನ್ನೋದರ ಮೇಲೆ ಬಂಧನ ಅಥವಾ ಮುಕ್ತಿಯ ಅರಿವು ಡಿಪೆಂಡ್ ಆಗುತ್ತದೆ. ಎಷ್ಟೋ ಮಂದಿ ಎಲ್ಲ ಬಿಟ್ಟು ಹೋಗ್ತಾರೆ. ಹುಟ್ಟಿದ ಮಕ್ಕಳನ್ನೂ ಬಿಟ್ಟುಹೋದ ಉದಾಹರಣೆಗಳಿವೆ. ಆದರೆ, ಹೀಗೆ ಮಾಡುವುದು ಪುರುಷನಿಗೆ ತಪ್ಪಲ್ಲ. 'ಅವನಿಗೆ ಏನು ಪರಿಸ್ಥಿತಿಯಿತ್ತೋ, ಏನು ಕಷ್ಟ ಬಂದಿತ್ತೋ...' ಎಂಬ ಕನ್ಸಿಡರೇಶನ್ ಬರುತ್ತದೆ. ಹೆಣ್ಣಿನ ವಿಷಯದಲ್ಲಿ ಹಾಗಾಗೋದಿಲ್ಲ. ಆದರೆ, ಹೆಣ್ಣಿಗೇ ಮಕ್ಕಳನ್ನು ಬಿಟ್ಟು ಹೋಗುವುದು ಸರಿಯಲ್ಲ ಅನಿಸುತ್ತಲ್ಲ, ಅದೇ ನೀ ಹೇಳೋ ಜೈವಿಕ ಬಂಧನ.

◆ **ನಿಮ್ಮ ಕಥೆಗಳು ಈ ಬಂಧ-ಮುಕ್ತಿಯ ಅರಿವನ್ನು ಬೌದ್ಧಿಕ ತೀವ್ರತೆಯಲ್ಲಿ ಗಮನಿಸಿದರೆ, ಶಶಿಕಲಾ ವೀರಯ್ಯಸ್ವಾಮಿ, ಗೀತಾ ನಾಗಭೂಷಣ ಮುಂತಾದವರ ಬರಹದಲ್ಲಿ ಜೈವಿಕ ತೀವ್ರತೆಯೇ ಒಂದು ಭಿನ್ನ ಅರಿವಾಗಿ ರೂಪುತಾಳುತ್ತದೆ. ಇತ್ತೀಚೆಗೆ ಬರೆಯುತ್ತಿರುವ ಶಾಂತಿ ಅಪ್ಪಣ್ಣ ಅವರ ಕಥೆಗಳವರೆಗೂ ಗಮನಿಸಿದರೆ ಸ್ತ್ರೀಲೋಕದ ನೂರುಸ್ವರಗಳು ಕೇಳಿಸುತ್ತವೆ. ಜಗತ್ತಿನ ಭಿನ್ನ ಪ್ರದೇಶ ಹಾಗೂ ಜನಾಂಗಗಳ ಮಹಿಳೆಯರ ಅಭಿವ್ಯಕ್ತಿಯಲ್ಲೂ ಈ ಭಿನ್ನ ಸಂವೇದನೆಗಳು ಸಹಜ. ಮದುವೆ, ಕುಟುಂಬ, ಸಮಾಜ ಇಂತಹ ಸಾಂಸ್ಥಿಕ ರಚನೆಗಳ ಆಚೆಯೇ ಹೆಣ್ಣಿನ ಅರಿವಿನ ಲಯಗಳಿವೆಯೆಂದು ಕಾಣುತ್ತದೆ.**

ಹೆಚ್ಚೂ ಕಡಿಮೆ ಹೆಣ್ಣಿನ ಅನುಭವ ಯುನಿವರ್ಸಲ್ ಸ್ವರೂಪದ್ದೆನಿಸುತ್ತದೆ. ಆದರೆ ಅವರವರ ಹಿನ್ನೆಲೆಗನುಗುಣವಾಗಿ ಕೆಲವೊಮ್ಮೆ ಬೇರೆಯೂ ಆಗುತ್ತದೆ. ನಮ್ಮ ಇಂಡಿಯಾದ ಹೆಣ್ಣಿಗೆ ಎಷ್ಟು ಬಂಧನವಿದೆಯೋ ಅದಕ್ಕಿಂತ ಹೆಚ್ಚು ಆಫ್ರಿಕಾದ ಹೆಣ್ಣಿಗಿರಬಹುದು. ಪಾಕಿಸ್ತಾನದಲ್ಲಿ ಇದಕ್ಕಿಂತ ಜಾಸ್ತಿ ಇರಬಹುದು. ತಾಲಿಬಾನಿನಲ್ಲಂತೂ ಮ್ಯಾಕ್ಸಿಮಮ್ ಇರಬಹುದು. ಅವರವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳಿಗನುಗುಣವಾಗಿ ಬಂಧನದ ಭಾರ ಹೆಚ್ಚುಕಡಿಮೆಯಾಗುತ್ತದೆ. ಬಟ್ ಒಟ್ಟಾರೆಯಾಗಿ ಬಂಧನ ಎಂಬುದು ಎಲ್ಲ ಹೆಣ್ಣುಮಕ್ಕಳಿಗೂ ಇದೆ.

◆ **ನಿಮ್ಮ ಕಥೆಗಳು ಲೈಂಗಿಕ ಸ್ವಾತಂತ್ರ್ಯದ ಕುರಿತು ಮುಕ್ತವಾಗಿ ಮಾತನಾಡಿದಾಗ ಸಾಂಪ್ರದಾಯಿಕ ಸಮಾಜ ಬೆಚ್ಚಿಬಿದ್ದಿತು. ಆದರೆ ಮನುಷ್ಯ ಮೂಲಭೂತವಾಗಿ ಲೈಂಗಿಕಜೀವಿ. ಆದರೆ, ಅದನ್ನು ಮರೆಮಾಚಿ ಸಭ್ಯತೆಯ ಸೋಗುಹಾಕುತ್ತಾ ಅಸಹಜಗೊಳ್ಳುವ ಮನುಷ್ಯ ವರ್ತನೆಗಳ ಅನೂಹ್ಯತೆಯನ್ನು ಹೆಣ್ಣಿನ ಸಂದರ್ಭದಲ್ಲಿಯೂ ನೀವು ಶೋಧಿಸಿದಿರಿ. ಹೆಣ್ಣಿನ ಲೈಂಗಿಕತೆಯನ್ನು ಪಾವಿತ್ರ್ಯ, ಪಾತಿವ್ರತ್ಯಗಳ ಚೌಕಟ್ಟಿನಲ್ಲಿ ಹುದುಗಿಸಿಟ್ಟ ಸಾಂಸ್ಕೃತಿಕ ಸಿದ್ಧಮಾದರಿಗಳಿಗೆ ಒಗ್ಗಿಕೊಂಡ ಸಮಾಜ ಈ ಮಾದರಿಗಳನ್ನು ಒಡೆದುಹಾಕುವ ನಿಮ್ಮ ದಿಟ್ಟತನವನ್ನು ಹೇಗೆ ಸ್ವೀಕರಿಸಿತು?**